ದಿನಾಂಕ 15.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಶ್ರೀ.ಸಿ.ಪಿ.ಸಿ. ವಕೀಲರಿಂದಃ-**

ನಾನು ನಿಟ್ಟೂರು ಗ್ರಾಮದ ಮಲ್ಲೆಂಗಡ ಕುಟುಂಬಕ್ಕೆ ಸೇರಿದವನು. ನನ್ನ ಮುತ್ತಜ್ಜನ ಹೆಸರು ಗಣಪತಿ. ನನ್ನ ಮುತ್ತಜ್ಜನ ತಂದೆಯ ಹೆಸರು ಮಾಚಯ್ಯ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುತ್ತಜ್ಜನಾದ ಮಲ್ಲೆಂಗಡ ಗಣಪತಿಯವರಿಗೆ ಮಂದಪ್ಪ ಮತ್ತು ಚೆಂಗಪ್ಪ ಎಂಬ ಇಬ್ಬರು ಮಕ್ಕಳು. ನನ್ನ ಅಜ್ಜನ ಹೆಸರು ಚಂಗಪ್ಪ. ಅವರ ಪತ್ನಿಯ ಹೆಸರು ನಂಜಮ್ಮ. ಮಂದಪ್ಪರವರ ಪತ್ನಿಯ ಹೆಸರು ನನಗೆ ಗೊತ್ತಿಲ್ಲ. ನನ್ನ ಅಜ್ಜ ಚಂಗಪ್ಪರವರು ಮೃತರಾದ ಬಳಿಕ ನನ್ನ ಅಜ್ಜಿ ನಂಜಮ್ಮರವರು ಮಂದಪ್ಪರವರನ್ನು ವಿವಾಹವಾಗಿರುತ್ತಾರೆ ಎಂದರೆ ನನಗೆ ಗೊತಿಲ್ಲ. ನನ್ನ ಅಜ್ಜನಾದ ಚಂಗಪ್ಪರವರಿಗೆ ಗಣಪತಿ ಮತ್ತು ಗಂಗಮ್ಮ ಎಂಬ ಇಬ್ಬರು ಮಕ್ಕಳು. ಸದರಿ ಗಣಪತಿ ನನ್ನ ತಂದೆ. ನನ್ನ ಅಜ್ಜಿ ನಂಜಮ್ಮರವರು ಮಂದಪ್ಪರವರನ್ನು ವಿವಾಹವಾದ ಬಳಿಕ ಅವರಿಗೆ ಕಾಶಿ, ಸುಬ್ರಮಣಿ, ಶಾಂತಿ ಮತ್ತು ತಿಲಕ್ ಎಂಬ 4 ಜನ ಮಕ್ಕಳು ಜನಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ನಾನು, ವಿನೀಶ್ ಮತ್ತು ಲತಾ ಎಂಬ 3 ಜನ ಮಕ್ಕಳು ಎಂದರೆ ಸರಿ.

ದಿಃ 08.06.1970 ರಲ್ಲಿ ನನ್ನ ತಂದೆ ಮತ್ತು ನನ್ನ ಅತ್ತೆಯಾದ ಗಂಗಮ್ಮರವರ ನಡುವೆ ನೋಂದಾಯಿತ ವಿಭಾಗಪತ್ರವಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಸ್ವತ್ತುಗಳನ್ನು ದಿಃ 08.06.1970 ರಲ್ಲಿ ವಿಭಾಗ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ವಿಭಾಗಪತ್ರವಾದ ಬಳಿಕ ನನ್ನ ತಂದೆಯ ಹಿಸ್ಸೆಗೆ ಬಂದ ಜಮೀನನ್ನು ನಾವು ಬೇರೆಯವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರಗಳಿಗೆ ನಾನು ಸಹ ಸಹಿ ಮಾಡಿರುತ್ತೇನೆ

ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆಃ 66/1999 ನ್ನು ನನ್ನ ಅಕ್ಕ ಮತ್ತು ಅಣ್ಣ ನನ್ನ ಹಾಗೂ ಖರೀದಿದಾರರ ವಿರುದ್ಧ ವಿಭಾಗ ಕೋರಿ ದಾವೆಯನ್ನು ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ 66/1999 ರಲ್ಲಿ ನನ್ನ ಸಹೋದರ ಮತ್ತು ಸಹೋದರಿಯರು 7 ಕ್ರಯಪತ್ರಗಳನ್ನು ಪ್ರಶ್ನಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಅಸಲು ದಾವೆಯಲ್ಲಿ ನನಗೆ ಸಮನ್ಸ್ ಜಾರಿಯಾಗಿಲ್ಲದೇ ಇರುವುದನ್ನು ಪ್ರಶ್ನಿಸಿ ಪ್ರಸ್ತುತ ಅರ್ಜಿಯನ್ನು ನಾನು ಹೂಡಿರುತ್ತೇನೆ.

1999 ನೇ ಇಸವಿಯಲ್ಲಿ ನಾನು ಚಿಕ್ಕಮಂಗಳೂರಿನ ಬಾಲನೂರು ಕಾಫಿ ಎಸ್ಟೇಟ್ ನಲ್ಲಿ ಕೆಲಸ ಮಾಡುತ್ತಿದ್ದೆನು. ನಾನು 1999 ನೇ ಇಸವಿಯಲ್ಲಿ ಎಸ್.ಸಿ. ಸಂಖ್ಯೆಃ 46/1999 ರಲ್ಲಿ ಆರೋಪಿಯಾಗಿದ್ದೆನು ಎಂದರೆ ಸರಿಯಲ್ಲ. 1999 ನೇ ಇಸವಿಯುಲ್ಲಿ ನನ್ನ ವಿರುದ್ದ, ಕೊಲೆ ಆಪಾದನೆ ಪ್ರಕರಣ ದಾಖಲಾಗಿರಲಿಲ್ಲ. ನನ್ನನ್ನು ಜೀವನ್ ಎಂಬ ಹೆಸರಿನಿಂದಲೂ ಸಹ ಕರೆಯುತ್ತಾರೆ. ದಿಃ30.08.2003 ರಲ್ಲಿ ನಾನು ನಿಟ್ಟೂರು ಗ್ರಾಮದಲ್ಲಿ ವಾಸವಾಗಿದ್ದೆನು ಎಂದರೆ ಸರಿಯಲ್ಲ. ನಾನು ಕ್ರಿಮಿನಲ್ ಪ್ರಕರಣದಲ್ಲಿ ಆರೋಪಿಯಾಗಿದ್ದುದ್ದರಿಂದ ಅಸಲು ದಾವೆ ಸಂಖ್ಯೆಃ 66/1999 ರಲ್ಲಿ ನನ್ನ ತಂದೆ ನನ್ನ ಪರವಾಗಿ ಪ್ರತಿನಿಧಿಸುತ್ತಿದ್ದರು ಎಂದರೆ ಸರಿಯಲ್ಲ. ಅಸಲು ದಾವೆಯ ತೀರ್ಪು ಆದ ದಿನಾಂಕ ನನಗೆ ಗೊತ್ತಿಲ್ಲ.

ಅಸಲು ದಾವೆ ಇತ್ಯರ್ಥಕ್ಕಾಗಿ ಬಾಕಿ ಇದ್ದಾಗ ದಿಃ 09.01.2004 ರಂದು ನನ್ನ ತಂದೆ ಮತ್ತು ನಾವು 4 ಜನ ಮಕ್ಕಳು ಸರ್ವೆ ನಂ. 145 ರಲ್ಲಿ ನಾಲ್ಕು ಎಕರೆ ಜಮೀನನ್ನು ಮಾಪಂಗಡ ಪೂವಯ್ಯರವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿಃ 22.01.2004 ರಂದು ಸದರಿ ಕ್ರಯಪತ್ರಕ್ಕೆ ಸಂಬಂಧಿಸಿದಂತೆ ನಾವುಗಳು ತಿದ್ದುಪಡಿ ಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ದಿಃ26.02.2010 ರಂದು ಅಸಲು ದಾವಾ ಸಂಖ್ಯೆಃ 66/1999 ನ್ನು ನ್ಯಾಯಾಲಯವು ವಜಾ ಮಾಡಿರುತ್ತದೆ ಎಂದರೆ ಸರಿ. ಅಸಲು ದಾವೆ ಸಂಖ್ಯೆ 66/1999 ನ್ನು ದಾಖಲು ಮಾಡಿದ ದಿನಾಂಕದಿಂದ ಅಂತಿಮ ತೀರ್ಪು ಆಗುವವರೆಗೂ ದಾವೆಯ

ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಅಂತಿಮ ತೀರ್ಪು ಆದ ಬಳಿಕ ನಾನು ಖರೀದಿದಾರರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಈ ಸುಳ್ಳು ಅರ್ಜಿಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 2017 ನೇ ಇಸವಿಯಲ್ಲಿ ಅಸಲು ದಾವಾ ಸಂಖ್ಯೆ 66/1999 ವಜಾಗೊಂಡ ವಿಚಾರ ನನಗೆ ಗೊತ್ತಾಗಿರುತ್ತದೆ.

ನಾನು ಚಿಕ್ಕಮಂಗಳೂರಿನಿಂದ ನಿಟ್ಟೂರಿಗೆ ಆಗಾಗ್ಗೆ ಬಂದು ಹೋಗುತ್ತಿದ್ದೆನು. ನಾನು ಕಳೆದ 10 ವರ್ಷಗಳಿಂದ ನಿಟ್ಟೂರು ಗ್ರಾಮದಲ್ಲಿ ವಾಸವಾಗಿದ್ದೆನು. ನಾನು ಚಿಕ್ಕಮಂಗಳೂರಿನಿಂದ ಆಗಾಗ್ಗೆ ನಿಟ್ಟೂರಿಗೆ ಬಂದು ಹೋಗುತ್ತಿದ್ದ ಸಂದರ್ಭದಲ್ಲಿ ದಾವೆಯ ಬಗ್ಗೆ ನನ್ನ ಅಕ್ಕ ಮತ್ತು ಅಣ್ಣ ನನಗೆ ಯಾವುದೇ ಮಾಹಿತಿಯನ್ನು ನೀಡಿರಲಿಲ್ಲ. 2017 ನೇ ಇಸವಿಯಲ್ಲಿ ನಾನು ಗಂಗಮ್ಮ, ಕುಟ್ಟಪ್ಪ, ಲವಕುಮಾರ್ ಮತ್ತು ಮುತ್ತಪ್ಪರವರ ವಿರುದ್ಧ ಸರ್ವೆ ನಂ. 97/1 ರಲ್ಲಿನ 3 ಎಕರೆ 85 ಸೆಂಟ್ಸ್ ವಿಸ್ತೀರ್ಣದ ಜಮೀನಿಗೆ ಸಂಬಂಧಿಸಿದಂತೆ ಅಸಲು ದಾವಾ ಸಂಖ್ಯೆ 63/2017 ನ್ನು ಶಾಶ್ವತ ನಿರ್ಬಂಧ ಕಾಜ್ಞೆ ಕೋರಿ ಸಲ್ಲಿಸಿದ್ದೆನು ಎಂದರೆ ಸರಿ. 2015 ರಿಂದ ಸರ್ವೆ ನಂ:97/1 ರ ಸ್ವತ್ತು ನನ್ನ ಸ್ವಾ ಧೀನಾನುಭವದಲ್ಲಿತ್ತು ಎಂದರೆ ಸರಿ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

ಸಹಿ:
ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.

(ಸಾಕ್ಷಿದಾರರ ಸಹಿ)